## ‘ಓಕ್ ಬ್ಲಫ್ಸ್’ನ ಅನನ್ಯ ಕಾಟೇಜ್ ಮ್ಯೂಸಿಯಂ!

# ಬಣ್ಣದ ಮನೆಗಳ ಮಾಯಾಲೋಕ



**ಗಗನಚುಂಬಿ ಕಟ್ಟಡಗಳಿಗೆ ಅಮೆರಿಕ ಪ್ರಸಿದ್ಧ. ಆದರೆ, ಮಾರ್ಥಾಸ್ ವಿನಿಯಾರ್ಡ್ ಅಮೆರಿಕದ ಬೇರೊಂದು ಮುಖವನ್ನು ಕಾಣಿಸುತ್ತದೆ. ನೂರಿನ್ನೂರು ವರ್ಷಗಳ ಮನೆಗಳನ್ನು ಅಲ್ಲಿ ಸಂರಕ್ಷಿಸಲಾಗಿದೆ. ತಲೆಮಾರುಗಳ ಜೀವನಶೈಲಿಯ ನೆನಪುಗಳಂತೆ ಕಾಣಿಸುವ ಆ ಮನೆಗಳನ್ನು ಹೊಂದಿರುವ ಇಡೀ ದ್ವೀಪವೇ ಒಂದು ಕಲಾತ್ಮಕ ಕೊಲಾಜ್‌ನಂತಿದೆ.**

■ ಜಿ. ನಾಗೇಂದ್ರ

ಆಯಾ ಪ್ರದೇಶಗಳ ವಾತಾವರಣಕ್ಕೆ ತಕ್ಕಂತೆ ವಿಭಿನ್ನ ರೀತಿಯ ಮನೆಗಳು ನಮಗೆ ಕಾಣಸಿಗುತ್ತವೆ. ಅಮೆರಿಕ ದೇಶವಂತೂ ಗಗನಚುಂಬಿ ಕಟ್ಟಡಗಳಿಗೆ ಪ್ರಖ್ಯಾತಿ. ಅಲ್ಲಿನ ವಿವಿಧ ವಿನ್ಯಾಸಗಳ ಮನೆ ಹಾಗೂ ವಾಣಿಜ್ಯ ಕಟ್ಟಡಗಳು ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ಸಂಯುಕ್ತ ರಾಜ್ಯಗಳಲ್ಲಿ ಕೆಲವು ರಾಜ್ಯಗಳ ನಯನ ಮನೋಹರ ಪ್ರಕೃತಿ ಹಾಗೂ ಭೂದೃಶ್ಯಗಳು ಪ್ರವಾಸಿಗರನ್ನು ಸೆಳೆಯುತ್ತವೆ.

ಅಮೆರಿಕದ ಮೆಸ್ಸಾಚುಸೆಟ್ಸ್ ರಾಜ್ಯದ ಕೇಪ್ ಕಾಡ್‌ನ ದಕ್ಷಿಣ ಭಾಗದ ಡ್ಯೂಕ್ಸ್ ಜಿಲ್ಲೆಯಲ್ಲಿರುವ ಮಾರ್ಥಾಸ್ ವಿನಿಯಾರ್ಡ್ (MARTHAS VINEYARD) ಪ್ರವಾಸಿಗರ ಅಚ್ಚುಮೆಚ್ಚಿನ ಸ್ಥಳ. ಕೆಲವರು ಈ ಸ್ಥಳವನ್ನು ‘ಮಾರ್ಥಾಸ್ ವೈನ್ ಯಾರ್ಡ್’ ಎಂದು ತಪ್ಪಾಗಿ ಉಚ್ಚರಿಸುತ್ತಾರೆ. ಪೂರ್ವ ಕರಾವಳಿಯ ಮೂರನೇ ಅತಿ ದೊಡ್ಡ ದ್ವೀಪವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ, 226 ಚದರ ಕಿ.ಮೀ. ವಿಸ್ತೀರ್ಣವುಳ್ಳ ಈ ದ್ವೀಪದಲ್ಲಿರುವ ಅನೇಕ ವಿಶೇಷತೆಗಳಿಗೆ ಮನಸೋತು ಪ್ರಪಂಚದ ವಿವಿಧ ಮೂಲೆಗಳಿಂದ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ.

ಅಮೆರಿಕ ಪ್ರವಾಸದಲ್ಲಿದ್ದಾಗ ‘ಮಾರ್ಥಾಸ್ ವಿನಿಯಾರ್ಡ್’ ಭೇಟಿಗಾಗಿಯೇ ಒಂದು ದಿನ ಮೀಸಲಿರಿಸಿದ್ದೆ. ಮೆಸ್ಸಾಚುಸೆಟ್ಸ್‌ನ ರಾಜಧಾನಿ ಬೋಸ್ಟನ್ ನಗರದ ವಾಲ್ತಾಮ್‌ನಲ್ಲಿರುವ ಹಯಾತ್ ಹೌಸ್ ಹೋಟೆಲ್‌ನಿಂದ ಕಾರಿನಲ್ಲಿ ‘ಕ್ವಿನ್ಸಿ ಮಾರ್ಕೆಟ್’ ತಲುಪಿದೆ. ಅಲ್ಲಿಂದ ಪ್ರವಾಸಿಗರನ್ನು ಹೊತ್ತ ಬಸ್ ಹೊರಟಿತು. ಸುಮಾರು ಒಂದು ಗಂಟೆ ಪ್ರಯಾಣದ ನಂತರ ನಾವು ‘ವುಡ್ಸ್ ಹೋಲ್ ಹೇವೆನ್’ ತಲುಪಿದೆವು. ಪ್ರವಾಸಿಗರು ಫೆರ್ರಿ ಅಥವಾ ವಿಮಾನದ ಮೂಲಕವೇ ಮಾರ್ಥಾಸ್ ವಿನಿಯಾರ್ಡ್ ತಲುಪಬೇಕು. ನಮ್ಮ ತಂಡದ ಐವತ್ತು ಪ್ರವಾಸಿಗರು ಫೆರ್ರಿ ಮೂಲಕ ಮಾರ್ಥಾಸ್ ವಿನಿಯಾರ್ಡ್ ಗೆ ಪಯಣಿಸಲು ತೀರ್ಮಾನಿಸಿದೆವು. ನಾವು ಪ್ರಯಾಣಿಸುತ್ತಿದ್ದ ಫೆರ್ರಿ, 505 ಮಂದಿ ಪ್ರವಾಸಿಗರನ್ನು ಕೊಂಡೊಯ್ಯುವ ಸಾಮರ್ಥ್ಯವುಳ್ಳದ್ದಾಗಿತ್ತು.

ಅಟ್ಲಾಂಟಿಕ್ ಸಾಗರದ ತಿಳಿ ನೀಲಿ ಬಣ್ಣದ ನೀರಿನಲ್ಲಿ ಸಾಗುವ ಸುಮಾರು 45 ನಿಮಿಷಗಳ ಫೆರ್ರಿ ಪ್ರಯಾಣ ಅವಿಸ್ಮರಣೀಯ. ಪ್ರಪಂಚದ ಅನೇಕ ದೇಶಗಳಿಂದ ಬಂದ ಪ್ರವಾಸಿಗರನ್ನು ಪರಿಚಯಿಸಿಕೊಂಡು ಅವರ ದೇಶದ ಸಂಸ್ಕೃತಿ, ಆಚಾರ, ವಿಚಾರಗಳ ಬಗೆ ಅವರ ಬಾಯಿಂದಲೇ ಕೇಳಿ ತಿಳಿದುಕೊಳ್ಳುವುದು ಆಸಕ್ತಿದಾಯಕವಾಗಿತ್ತು.

ಫೆರ್ರಿಯಿಂದ ಇಳಿದ ನಮ್ಮ ತಂಡ ಐತಿಹಾಸಿಕ ಮನೆಗಳನ್ನು ವೀಕ್ಷಿಸಲು ‘ಓಕ್ ಬ್ಲಫ್ಸ್’ ಪಟ್ಟಣಕ್ಕೆ ಸಾರ್ವಜನಿಕ ಸಾರಿಗೆ ಬಸ್ ಮೂಲಕ ಹೊರಟಿತು. ನಂತರ ‘ಕಾಟೇಜ್ ವಿಲೇಜ್’ ಮನೆಗಳ ಅಂದವನ್ನು ಕಣ್ತುಂಬಿಕೊಳ್ಳಲು ಕಾಲ್ನಡಿಗೆಯಲ್ಲಿ ಹೊರಟೆವು. ಬಿಳಿ, ಕೆಂಪು, ನೀಲಿ, ಹಳದಿ, ಕೆನೆ ಬಣ್ಣ... ಹೀಗೆ ಹಲವು ಬಣ್ಣಗಳ ಮನೆಗಳನ್ನು ನೋಡಿದೆವು.

‘ಲಾವ್ವೆ ಎನ್ ರೋಸ್’ ಗುಲಾಬಿ ಬಣ್ಣದ ಮನೆಯ ಹೆಸರಾದರೆ, ನೇರಳೆ ಬಣ್ಣದ ಮನೆಯ ಹೆಸರು ‘ಪರ್ಪಲ್ ಏಂಜಲ್’. ಬಿಳಿ ಬಣ್ಣದ ಮನೆಯ ಹೆಸರು ‘ಕಾಸಾಬ್ಲಾಂಕಾ’. ಹೀಗೆ ಪ್ರತಿಯೊಂದು ಮನೆಯ ಹೆಸರಿನ ಹಿಂದಿರುವ ಇತಿಹಾಸ ಸ್ವಾರಸ್ಯಕರವಾಗಿದೆ. ಸುಸ್ಥಿತಿಯಲ್ಲಿ, ಮನಮೋಹಕವಾಗಿರುವ, ಐತಿಹಾಸಿಕ ಮಹತ್ವ ಪಡೆದಿರುವ, 200 ವರ್ಷಗಳಷ್ಟು ಹಳೆಯದಾದ ಮನೆಗಳನ್ನು ನೋಡುವ ಭಾಗ್ಯ ನಮ್ಮ ಪಾಲಿಗೆ ಒದಗಿ ಬಂದಿತ್ತು.

ಗಾಢ ಬಣ್ಣದ, ಗೋಥಿಕ್ ಶೈಲಿಯ ಮನೆಗಳನ್ನು ಹೊಂದಿರುವ ಮಾರ್ಥಾಸ್ ವಿನಿಯಾರ್ಡ್‌ನ ‘ಓಕ್ ಬ್ಲಫ್ಸ್’ನಲ್ಲಿರುವ ‘ಜಿಂಜರ್ ಬ್ರೆಡ್’ ಮನೆಗಳ ಆಕರ್ಷಣೀಯ ವಿಶಿಷ್ಟ ವಾಸ್ತುಶೈಲಿ ಪ್ರವಾಸಿಗರನ್ನು ಆಕರ್ಷಿಸಿತು. ಕೇವಲ ಹಲಗೆಗಳಿಂದ ನಿರ್ಮಿಸಲಾಗಿರುವ ಗಾಢ ಬಣ್ಣದ ಮನೆಗಳ ಕ್ಯಾಂಡಿ ರೀತಿಯ ಸ್ಥಂಭಗಳು, ಅಲಂಕೃತ ಕುಟೀರಗಳು, ‘ ಜಿಂಜರ್ ಬ್ರೆಡ್ ಹೌಸ್’ ಎಂದು ಕರೆಯಲಾಗುವ ಇಂತಹ ಮನೆಗಳು ಅಮೆರಿಕದ ಇತರೆ ಪ್ರದೇಶಗಳಲ್ಲಿ ಕಾಣಲು ಸಿಗುವುದಿಲ್ಲ.

1835ರಲ್ಲಿ ನಿರ್ಮಿಸಲಾಗಿರುವ ವೆಸ್ಲಿಯನ್ ಸಮುದಾಯದ ಇತಿಹಾಸ ಹಾಗೂ ಧಾರ್ಮಿಕ ವಿಷಯಗಳನ್ನು ಪರಿಚಯಿಸುವ ಮನೆಗಳು ಅಮೆರಿಕದ ಇತರೆ ಮನೆಗಳಿಗಿಂತಲೂ ಭಿನ್ನವಾಗಿವೆ. ಮನೆಯ ಮುಂದೆ ತೂಗಿಬಿಡಲಾದ ಹೂವಿನ ಕುಂಡಗಳು, ಛಾವಣಿಯ ಮೇಲೆ ನೇತಾಡುವ ಸುರುಳಿಯಾಕಾರದ ಮರದ ಅಲಂಕಾರಗಳು ಎಂತಹವರನ್ನೂ ಮಂತ್ರಮುಗ್ಧಗೊಳಿಸುತ್ತವೆ. ಮನೆಯ ಮುಂದಿರುವ ಹೂತೋಟದಲ್ಲಿ ಬಣ್ಣ ಬಣ್ಣದ ಹೂಗಳು ಮನಸೆಳೆಯುತ್ತವೆ. ಎಲ್ಲ ಮನೆಗಳ ಸುತ್ತಲೂ ನಿರ್ಮಿಸಿರುವ ಗೂಟಗಳಿಂದ ನಿರ್ಮಿಸಲಾದ ಫೆನ್ಸಿಂಗ್, ಇಳಿಜಾರಾದ ಮೇಲ್ಛಾವಣಿಯು ಡೇರೆಗಳನ್ನು ನೆನಪಿಸುತ್ತವೆ.

ಮನೆಗಳಿಗೆ ಹಲವು ಬಣ್ಣಗಳನ್ನು ಬಳಿಯಲಾಗಿದೆ. ವಿನ್ಯಾಸ ವಿಚಿತ್ರವಾಗಿದೆ. ‘ಗೋಥಿಕ್ ಶೈಲಿ’ಯಲ್ಲಿ ನಿರ್ಮಿಸಲಾಗಿರುವ ಮನೆಗಳಲ್ಲಿ ಬಡಗಿಯ ಕಲಾ ನೈಪುಣ್ಯತೆ ಎದ್ದು ಕಾಣುತ್ತದೆ. ಮೂಲ ನಿವಾಸಿಗಳ ಇಂದಿನ ತಲೆಮಾರಿನವರು ಈ ಮನೆಗಳಲ್ಲಿ